159ನೇ ೮
98

# ಕರ್ನಾಟಕ ವಿಧಾನ ಪರಿಷತ್ತು

**ಪ್ರಸ್ತಾಪ:**

ದಿನಾಂಕ:06-02-2024 ರಂದು ಕರ್ನಾಟಕ ಸ್ಟ್ಯಾಂಪ್ ಕಾಯ್ದೆಗೆ ಮಾಡಲಾದ ತಿದ್ದುಪಡಿಯ ಪರಿಣಾಮವಾಗಿ ಕೈಗಾರಿಕೋದ್ಯಮಿಗಳು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಮೂಲಸೌಕರ್ಯ ಕ್ಷೇತ್ರದ ಸಂಸ್ಥೆಗಳು, ಗುತ್ತಿಗೆದಾರರು ಹಾಗೂ ಇತರೆ ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆಗಳು ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ ಅನುಚ್ಛೇದ 6(1)(ii) ಅಡಿಯಲ್ಲಿ ಮೆಮೊರಂಡಮ್ ಆಫ್ ಡೆಪಾಸಿಟ್ ಆಫ್ ಟೈಟಲ್ ಡೀಡ್ಸ್ (ಸಮನ್ಯಾಯ ಅಡಮಾನ) ನೋಂದಣಿಗೆ ವಿಧಿಸಲಾಗುವ ಸ್ಟ್ಯಾಂಪ್ ಶುಲ್ಕಕ್ಕೆ ಗರಿಷ್ಠ ಮಿತಿಯನ್ನು ಮರುಸ್ಥಾಪಿಸುವ ಕುರಿತು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.

**ಉತ್ತರ:**

ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವ ಸಂದರ್ಭದಲ್ಲಿ ಬರೆದು ಕೊಡಲಾಗುವ ಮೆಮೊರಂಡಮ್ ಆಫ್ ಡೆಪಾಸಿಟ್ ಆಫ್ ಟೈಟಲ್ ಡೀಡ್ಸ್ (ಡಿ.ಟಿ.ಡಿ) ದಸ್ತಾವೇಜುಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಷೆಡ್ಯೂಲ್‌ನ ಆರ್ಟಿಕಲ್ 6(1)(ii) ಅಡಿಯಲ್ಲಿ, ಸಾಲದ ಮೊತ್ತದ ಮೇಲೆ ಶೇಕಡ 0.5% ದರದಲ್ಲಿ ಮುದ್ರಾಂಕ ಶುಲ್ಕವನ್ನು ದಿನಾಂಕ: 03-02-2024 ರಿಂದ ಜಾರಿಗೆ ಬರುವಂತೆ ವಿಧಿಸಲಾಗುತ್ತಿದೆ.

ಡಿ.ಟಿ.ಡಿ. ದಸ್ತಾವೇಜುಗಳಿಗೆ ನೋಂದಣಿ ಶುಲ್ಕವನ್ನು ಶೇಕಡ 0.1% ದರದಲ್ಲಿ ರೂ.25,000/- ಗಳ ಗರಿಷ್ಠ ಮಿತಿಗೆ ಒಳಪಡಿಸಿ ವಿಧಿಸುವ ವ್ಯವಸ್ಥೆಯು ಜಾರಿಯಲ್ಲಿರುತ್ತದೆ. ಡಿ.ಟಿ.ಡಿ. ದಸ್ತಾವೇಜುಗಳಿಗೆ ವಿಧಿಸಲಾಗುವ ಮುದ್ರಾಂಕ ಶುಲ್ಕಕ್ಕೆ ಗರಿಷ್ಠ ಮಿತಿ ಅಳವಡಿಸುವ ಯಾವುದೇ ಪ್ರಸ್ತಾವನೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುವುದಿಲ್ಲ.

ಕಂಇ-ಎಂಎನ್‌ಎಸ್‌ಎ/282/2026

**(ಡಾ. ಜಿ.ಪರಮೇಶ್ವರ)**
ಉಪ ಮುಖ್ಯಮಂತ್ರಿ ಮತ್ತು
ಕಂದಾಯ ಸಚಿವರು